ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 54/2020

..............................................................

CW 03
PW 02

| | | |
|---|---|---|
| ಹೆಸರು | : | ಲಕ್ಷ್ಮಣ ಕಾಂಬಳೆ |
| ತಂದೆಯ ಹೆಸರು | : | ಕೃಷ್ಣಾ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ರೈತಾಪಿ ಕೆಲಸ |
| ವಾಸಸ್ಥಳ | : | ಮೌಳಂಗಿ, ತಾ:ಜೋಯಿಡಾ. |

ದಿನಾಂಕ 11-06-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಸುಮಾರು 4 ವರ್ಷಗಳ ಹಿಂದೆ ಪಂಚನಾಮೆಗೆ ಕರೆದು ನನ್ನ ಸಹಿ ಪಡೆದರು. ಏಕೆ ಸಹಿ ಪಡೆದರು ಗೊತ್ತಿಲ್ಲ.

ಸಾಕ್ಷಿಗೆ ನಿಪಿ 2 ಅನ್ನು ತೋರಿಸಿ ಸಹಿ ಗುರುತಿಸಲು ಸೂಚಿಸಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ 5 ಅನ್ನು ತೋರಿಸಿ ಸಹಿ ಗುರುತಿಸಲು ಸೂಚಿಸಿದ್ದು ಸಾಕ್ಷಿ ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 5 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ 6 ಮತ್ತು 4 ಅನ್ನು ತೋರಿಸಿದ್ದು, ಅದರಲ್ಲಿ ತಾನು ಕಂಡು ಬರುತ್ತೇನೆ ಎನ್ನುತ್ತಾರೆ.

ಜಾಗದಲ್ಲಿ ಏನು ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು :** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.

ದಿನಾಂಕ 30-01-2020 ರಂದು ತನಿಖಾಧಿಕಾರಿ ನನ್ನನ್ನು ಮತ್ತು ಚಾಸಾ 2 ರವರನ್ನು ಕರೆದುಕೊಂಡು ಚಾಸಾ 1 ರವರು ತೋರಿಸಿದ ಜಾಗದಲ್ಲಿ ಸಂಜೆ 05-00 ರಿಂದ 06-00 ವರೆಗೆ ಪಂಚನಾಮೆಯನ್ನು ಮಾಡಿದರು ಎಂದರೆ ಸರಿಯಲ್ಲ. ನಂತರ ನಕಾಶೆಯನ್ನು ತೆಗೆದರು ಎಂದರೆ ಸರಿಯಲ್ಲ. ಆಗ ದ ನಿಪಿ 4 ರಂತೆ ಭಾವಚಿತ್ರ ತೆಗೆದರು ಎಂದರೆ ಸರಿಯಲ್ಲ.

ನಂತರ ದಿನಾಂಕ 30-01-2020 ರಂದು ಸಂಜೆ 06-30 ರಿಂದ 07-15 ರ ವರೆಗೆ ನನ್ನ ಮತ್ತು ಚಾಸಾ 4 ರವರ ಸಮಕ್ಷಮ ನಿಪಿ 5 ರಂತೆ ಪೊಲೀಸ ಠಾಣೆಯಲ್ಲಿ ಕೆಎ-09-ಯು-4191 ನೋಂದಣಿ ಸಂಖ್ಯೆಯ ಟಿಪ್ಪರ ವಾಹನವನ್ನು ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಆರೋಪಿ ಗೊತ್ತಿಲ್ಲ. ಎಲ್ಲ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :** ಆರೋಪಿ ಪರ ಶ್ರೀ ಎಮ್ ಸಿ ಎಚ್ ವಕೀಲರು ಏನೂ ಇಲ್ಲ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.